ವಿಜಾಪುರ ತಾಲ್ಲೂಕಿನಲ್ಲಿ ವಿದ್ಯುತ್ ಸಮಸ್ಯೆ

2832 - ಶ್ರೀ ಬಸನಗೌಡ ಪಾಟೀಲ (ವಿಜಾಪುರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ತಾಲ್ಲೂಕಿನಲ್ಲಿ ವಿದ್ಯುತಿನ ತೀವ್ರ ಅಭಾವ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಬಿಜಾಪುರ ವಿಶೇಷವಾಗಿ ಬಸಾಪೂರ ಕವಲಗಿ, ಹೊನ್ನುಟಗಿ, ಶಿವಣಗಿ, ತಗ್ಗೋಡ, ಕುಮಟಗಿ, ಹತಗಲಿ ಭಾಗಗಳಲ್ಲಿ ತೀವ್ರ ವಿದ್ಯುತ್ ಅಡಚಣೆಯಿಂದ ರೈತರ ಬೆಳೆಗೆ ನಷ್ಟವಾಗುತ್ತಿರುವುದು. ಸರ್ಕಾರದ ಗಮನಕ್ಕೆ ಬಂದಿದೆಯೇ.

ಇ) ಹಾಗಿದ್ದಲ್ಲಿ ಈ ವ್ಯವಸ್ಥೆಯನ್ನು ಸರಿಪಡಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು.

ಈ) ಈ ಭಾಗಗಳನ್ನು ನಾಗರಾಣ ಭಾಗದಿಂದ ಬೇರ್ಪಡಿಸಿ, ವಿಜಾಪುರ ಕೈಗಾರಿಕ ವಸಾಹತು ವಿದ್ಯುತ್ ಜೋಡಣೆಗೆ ಜೋಡಿಸಲು ಸರಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ 220:11 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರವು ಫೆಬ್ರವರಿ '95ರಿಂದ ಕಾರ್ಯಾರಂಭ ಮಾಡಿದ್ದು, ಬಿಜಾಪುರ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ಪರಿಸ್ಥಿತಿಯಲ್ಲಿ ಸುಧಾರಣೆ ಉಂಟಾಗಿದೆ. ಈಗ ಹೆಚ್ಚಿನ ಪ್ರಮಾಣದ ಸಮಸ್ಯೆಗಳಿರುವುದಿಲ್ಲ.

ಆ) ಬಿಜಾಪುರದಲ್ಲಿರುವ 110 ಕೆ.ವಿ. ವಿದ್ಯುತ್ ಉಪ ಕೇಂದ್ರವು ಓವರ್ ಲೋಡ್ ಆಗುವುದನ್ನು ತಡೆಗಟ್ಟಲು ಬೆಳಿಗಿನ ಮತ್ತು ಸಂಜೆಯ ವೇಳೆಗಳಲ್ಲಿ ಲೋಡ್ ಶೆಡ್ಡಿಂಗನ್ನು ನಿರ್ವಹಿಸುತ್ತಿರುವುದರಿಂದ, ಈ ಸಮಯಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಉಂಟಾಗುತ್ತಿರುವುದು ಗಮನಕ್ಕೆ ಬಂದಿದೆ.

ಇ) ಹಾಲಿ ಇರುವ 110 ಕೆ.ವಿ. ವಿದ್ಯುತ್ ಉಪ ಕೇಂದ್ರದ ಮೇಲಿನ ಲೋಡನ್ನು ಕಡಿಮೆ ಮಾಡಲು ಮತ್ತು ಬಿಜಾಪುರ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ಮತ್ತಷ್ಟು ಸುಧಾರಣೆಗಾಗಿ, ಬಿಜಾಪುರ ಕೈಗಾರಿಕಾ ವಸಾಹತುವಿನಲ್ಲಿ ಒಂದು 110ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು ನಿರ್ಮಾಣ ಮಾಡಲಾಗುವುದು.

ಈ) ವಿಜಾಪುರ ಕೈಗಾರಿಕಾ ವಸಾಹತುವಿನ 11 ಕೆ.ವಿ. ಫೀಡರ್ ಈಗಾಗಲೇ ಓವರ್ ಲೋಡ್ ಆಗಿರುವುದರಿಂದ ಸದರೀ ಪ್ರದೇಶಗಳನ್ನು ನಾಗರಾಣಭಾಗದಿಂದ ಬೇರ್ಪಡಿಸಿ ಬಿಜಾಪುರ ಕೈಗಾರಿಕಾ ವಸಾಹತು ಫೀಡರಗೆ ಜೋಡಿಸಲು ಸಾಧ್ಯವಾಗುವುದಿಲ್ಲ.

ವಿಜಾಪುರ ಜಿಲ್ಲೆಯಲ್ಲಿ ಪಶು ವೈದ್ಯಕೀಯ ಆಸ್ಪತ್ರೆಗಳು

2131 - ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?